**ಚಾಸಾಃ 6   ಫ್ರಾಸಾಃ  4**

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 588/2023

| | | |
|---|---|---|
| ಹೆಸರು | : | ಪ್ರಶಾಂತ್ ಭಂಡಾರಿ |
| ತಂದೆಯ ಹೆಸರು | : | ಮಹಾಬಲ ಭಂಡಾರಿ |
| ಪ್ರಾಯ | : | 38  ವರ್ಷ |
| ಉದ್ಯೋಗ | : | ಹರಕೆ ಮಂಡೆ ಕೆಲಸ |
| ವಾಸ | : | ಅಂಡಿಂಜೆ ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 16.09.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 20.1.2022 ರಂದು ನನ್ನ ಅಕ್ಕ ಪ್ರಫುಲ್ಲಾ ರವರ ಮಗಳಾದ ಸೌಮ್ಯ ರವರ ಮದುವೆ ಮುಂಬೈ ವಿಶ್ವನಾಥ ಭಂಡಾರಿ ರವರ ಮಗನಾದ ವಿಕ್ರಮ್ ಭಂಡಾರಿ ರವರ ಜೊತೆ ಸುರತ್ಕಲ್ ಚರ್ಚ್ ಹಾಲ್‌ನಲ್ಲಿ ಆಗಿರುತ್ತದೆ. 23 ನೇ ತಾರೀಖು ಅವರು ಇಲ್ಲಿಂದ ಮುಂಬೈಗೆ ಅತ್ತೆ, ಮಾವ ಮತ್ತು ಗಂಡನ ಜೊತೆ ಹೋಗಿರುತ್ತಾರೆ. ದಿಃ 3.4.2022 ರಂದು ಅಕ್ಕನ ಮಗಳು ಗಂಡನ ಮನೆ ಬಿಟ್ಟು ಬಂದ ವಿಚಾರ ನನಗೆ ನನ್ನ ಅಕ್ಕನಿಂದ ತಿಳಿದುಬಂದಿರುತ್ತದೆ. ಅದೇ ದಿನ ಸಂಜೆ ನಾನು ಕೆಲಸವನ್ನು ಮುಗಿಸಿ ಮನೆಗೆ ಹೋಗುವ ಸಮಯದಲ್ಲಿ ನನ್ನ ಅಕ್ಕನ ಮನೆಗೆ ಹೋಗಿ ಅಕ್ಕನ ಮಗಳನ್ನು ವಿಚಾರಿಸಿದಾಗ ಗಂಡನಾದ ವಿಕ್ರಮ್ ರವರು ಸರಿಯಾಗಿ ಮನೆಗೆ ಬರುವುದಿಲ್ಲ, ಯಾವುದೇ ಕಾರಣ ಇಲ್ಲದೇ ಗಲಾಟೆ ಮಾಡುತ್ತಾರೆ ಎಂದು ಹೇಳಿದ್ದರು. ಅಲ್ಲದೆ ಒಂದು ದಿನ ಅವರಿಗೆ ಹಲ್ಲೆ ಮಾಡಿದ್ದಾರೆ ಎಂದು ಹೇಳಿದ್ದರು. ದಿಃ 2.4.2022 ರಂದು ವಿಕ್ರಮ್ ಮತ್ತು ಲಲಿತಾ ರವರು ಚಾಸಾ1 ರವರ ಜೊತೆ ಗಲಾಟೆ ಮಾಡಿ ನೀನು ನಾವು ಹೇಳಿದಷ್ಟು ಹಣವನ್ನು ಕೊಟ್ಟಿಲ್ಲ ಆದ್ದರಿಂದ ಮನೆ ಬಿಟ್ಟು ಹೋಗುವಂತೆ ಹೇಳಿದ್ದರು ಎಂದು ಹೇಳಿದ್ದರು. ಅದೇ ದಿನ ವಿಮಾನ ಟಿಕೇಟನ್ನು ಮಾಡಿಸಿ ಚಾಸಾ1 ರವರನ್ನು ಮನೆಗೆ

ಕಳುಹಿಸಿರುತ್ತಾರೆ ಎಂದು ಹೇಳುತ್ತಾರೆ. ಅಲ್ಲದೆ ಇನ್ನೂ ನೀನು ಇಲ್ಲಿಗೆ ಬರುವುದು ಬೇಡ, ನೀನು ಇಲ್ಲಿಗೆ ಬಂದರೆ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಹೇಳಿರುತ್ತಾರೆ ಎಂದು ಹೇಳಿದ್ದರು. ಆನಂತರ ನಾವು ದಿಃ 11.6.2022 ರಂದು ನಮ್ಮ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾದ ಸದಾಶಿವ ಭಂಡಾರಿ ಸಕಲೇಶಪುರ, ಸುರೇಶ್ ಭಂಡಾರಿ ಕಡಂದಲೆ ರವರ ಸಮಕ್ಷಮದಲ್ಲಿ ಪಂಚಾಯತಿ ಮಾಡಲು ಮುಂಬೈಗೆ ಹೋಗಿರುತ್ತೇವೆ. ಅಲ್ಲಿಯೂ ಸಹ 2 ನೇ ಆರೋಪಿ ಒಪ್ಪಿರುವುದಿಲ್ಲ. ಅವರ ಮನೆಯಲ್ಲಿದ್ದ ಬ್ಯಾಗನ್ನು ತಂದು ಎಸೆದಿರುತ್ತಾರೆ. ದಿಃ 10.8.2022 ಕ್ಕೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ದೂರು ಕೊಟ್ಟ ನಂತರ ಪೊಲೀಸರು ನಮ್ಮನ್ನು ಮುಂಬೈಗೆ ಮಹಜರ್ ಗಾಗಿ ಕರೆದಿದ್ದರು. ದಿಃ 10.8 ಕ್ಕೆ ನಮ್ಮನ್ನು ಮುಂಬೈಗೆ ಕರೆದುಕೊಂಡು ಹೋಗಿರುತ್ತಾರೆ, ದಿಃ 10.7 ಕ್ಕೆ ನಾವು ದೂರನ್ನು ನೀಡಿರುತ್ತೇವೆ. ಸುಮಾರು 12.30 ಗಂಟೆಯಿಂದ 1.30 ಗಂಟೆಯವರೆಗೆ ಮಹಜರ್ ಮಾಡಿರುತ್ತಾರೆ. ಮಹಜರ್ ಮಾಡುವಾಗ ನಾನು, ರಂಜಿತ್, ಪ್ರಶಾಂತ್ ಡಿ.ಎಸ್ ಹಾಗೂ ಪೊಲೀಸರು ಇದ್ದರು. ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ4 ಮತ್ತು 5 ನ್ನು ತೋರಿಸಲಾಗಿ ಅವುಗಳಲ್ಲಿ ತಾವು ಇರುವುದಾಗಿ ನೋಡಿ ಗುರುತಿಸಿರುತ್ತಾರೆ. ಪ್ರಕರಣದ ಬಗ್ಗೆ ಪೊಲೀಸರು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿದ್ದಾರೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿಃ 3.4.2022 ರಂದು ಚಾಸಾ1 ರವರನ್ನು ವಿಚಾರಿಸಿದಾಗ ಆಕೆ ಮದುವೆಯಾದ ಸ್ವಲ್ಪ ದಿನದ ನಂತರ 1 ನೇ ಆರೋಪಿ ಒಂದು ದಿನ ಬೆಳಿಗ್ಗ ವಿನಃ ಕಾರಣ ತಪ್ಪುಗಳನ್ನು ಹುಡುಕಿ ಗಲಾಟೆ ಮಾಡಿ ಮನೆಯಿಂದ ನೀನು ಹಣ ತರಲಿಲ್ಲ, ನಾನು ಕೇಳಿದಷ್ಟು ಹಣ ತರದೇ ಇದ್ದರೆ ಮನೆಯಿಂದ ಹೊರಗೆ ಹೋಗಬೇಕೆಂದು ಹೇಳಿ ಒತ್ತಾಯ ಮಾಡಿದ್ದರು ಎಂದು ಹೇಳಿದ್ದರು ಎಂದರೆ ಹೌದು. ಮನೆಯಿಂದ ಹೊರಗೆ ಹೋಗಲು ಎಲ್ಲಿಯೂ ಸಹ ಬಿಡುತ್ತಿರಲಿಲ್ಲ ಎಂದರೆ ಹೌದು. 1 ನೇ ಆರೋಪಿ ಚಾಸಾ1

ರವರ ಜೊತೆ ಒಂದು ವಾರದವರೆಗೆ ಚೆನ್ನಾಗಿಯೇ ಇದ್ದು ನಂತರದ ದಿನಗಳಲ್ಲಿ ರಾತ್ರಿ ಹೊತ್ತು ಮನೆಗೆ ಸರಿಯಾಗಿ ಬರುತ್ತಿರಲಿಲ್ಲ ಎಂದರೆ ಹೌದು. ಮದುವೆಯ ಪೂರ್ವದಲ್ಲಿ ಆತನಿಗೆ ಬೇರೆ ಹುಡುಗಿಯ ಜೊತೆ ಸಂಪರ್ಕ ಇದ್ದು ಅವಳ ಜೊತೆ ಅಕ್ರಮ ಸಂಬಂಧ ಇರುವ ಬಗ್ಗೆ ಚಾಸಾ1 ರವರಿಗೆ ಮಾಹಿತಿ ತಿಳಿದು ಆಕೆ 1 ನೇ ಆರೋಪಿಯಲ್ಲಿ ಕೇಳಿದಾಗ ನಾನು ಏನು ಬೇಕಾದರೂ ಮಾಡುತ್ತೇನೆ, ನೀನು ತವರಿಗೆ ಹೋಗು ಎಂದು ಹೇಳಿದ್ದರು ಎಂದರೆ ಹೌದು. ಈ ಬಗ್ಗೆ 1 ನೇ ಆರೋಪಿ ವಿರುದ್ಧ ಚಾಸಾ1 ರವರು ಮಾತನಾಡಿದಾಗ 2 ನೇ ಆರೋಪಿ ದಿಃ 29.3.2022 ರಂದು 1 ನೇ ಆರೋಪಿಯ ಜೊತೆ ಸೇರಿ ಇನ್ನೂ ಮುಂದೆ ಈ ವಿಚಾರದ ಬಗ್ಗೆ ಮಾತನಾಡಿದರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಬೆನ್ನಿಗೆ ಕೈಯಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಹೌದು. ನಂತರವು ಸಹ ಇದೇ ರೀತಿ ಬೆದರಿಕೆ ಹಾಕಿ ದಿಃ 2.4.2022 ರಂದು ರಾತ್ರಿ ಸಮಯ ಚಾಸಾ1 ರವರು 1 ನೇ ಆರೋಪಿಯನ್ನು ವಿರೋದಿಸಿ ಮಾತನಾಡಿದಾಗ 1 ನೇ ಆರೋಪಿ ಚಾಸಾ1 ರವರಿಗೆ ರಂಡೆ ನೀನು ಮನೆಯಲ್ಲಿರುವ ಅಗತ್ಯ ಇರುವುದಿಲ್ಲ, ನೀನು ತವರು ಮನೆಗೆ ಹೋಗು ಚಾಸಾ1 ರವರಿಗೆ ಕೈಯಿಂದ ಹಲ್ಲೆ ಮಾಡಿ ಕರಿಮಣಿ ಸರವನ್ನು ಕಿತ್ತು ಎಸೆದಿರುತ್ತಾರೆ ಎಂದರೆ ಹೌದು. ಇಲ್ಲಿಂದ ಕೂಡಲೇ ಹೊರಡು ನನಗೂ ನಿನಗೂ ಸಂಬಂಧ ಇರುವುದಿಲ್ಲ, ಈ ಬಗ್ಗೆ ದೂರು ಕೊಟ್ಟರೆ ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದರು ಎಂದರೆ ಹೌದು. ಈ ವಿಚಾರವನ್ನು ತಿಳಿದು ನಾವೆಲ್ಲೂರು ಸೇರಿ ಮಾತುಕತೆ ಮಾಡಿ ಬಿನ್ನಾಭಿಪ್ರಾಯ ಇದ್ದರೆ ಸರಿ ಮಾಡೋಣ ಎಂದು ಹೇಳಿ 1 ಮತ್ತು 2 ನೇ ಆರೋಪಿತರ ಜೊತೆ ಹೇಳಿದ್ದರೂ ಸಹ ಅವರು ಒಪ್ಪಿರುವುದಿಲ್ಲ ಎಂದರೆ ಹೌದು. ನಮ್ಮ ಜಾತಿ ಮುಖಂಡರ ಜೊತೆ ಮಾತನಾಡಿ ಆರೋಪಿತರು ನಮಗೆ ಸ್ಪಂದಿಸದ ಕಾರಣ ಚಾಸಾ1 ರವರು ದೂರು ನೀಡಿದ್ದಾರೆ ಎಂದರೆ ಹೌದು.

<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎಂ.ಆರ್ ವಕೀಲರಿಂದಃ</u>

ಆರೋಪಿತರು ನಿಮಗೆ ಸಂಬಂಧಿಕರಾ ಎಂದರೆ ಸಾಕ್ಷಿ ನನ್ನ ಮಾವನಿಗೆ ಸಂಬಂಧಿಕರು, ನನಗೆ ದೂರದ ಸಂಬಂಧಿಕರು ಎಂದು ಹೇಳುತ್ತಾರೆ. ಮದುವೆಯು ಹಿರಿಯರ ಒಪ್ಪಿಗೆಯಂತೆ ಆಗಿದೆ ಎಂದರೆ ಹೌದು. ಮದುವೆಯು ನನ್ನ ಅಕ್ಕನ ಮಗಳದು ಆದ ಕಾರಣ ಮದುವೆ ಚರ್ಚೆಯಲ್ಲಿ ನಾನು ಸಹ ಭಾಗಿಯಾಗಿದ್ದೆ ಎಂದರೆ ಹೌದು. ಎಂಗೇಜ್ ಮೆಂಟ್ ಮತ್ತು ಮದುವೆಯನ್ನು ಸರಳವಾಗಿ ಮಾಡಬೇಕೆಂದು ಇಬ್ಬರ ಮನೆಯವರು ತೀರ್ಮಾನ ಮಾಡಿದ್ದರು ಎಂದರೆ ಸಾಕ್ಷಿ ನಾವು ಸರಳವಾಗಿ ಮಾಡಬೇಕು ಎಂದು ಹೇಳಿದ್ದೆವು ಆದರೆ ಆರೋಪಿತರು ನಮ್ಮ ಲೆವೆಲ್‌ಗೆ ಆಗಬೇಕೆಂದು ಹೇಳಿದ್ದರು

ಎಂದು ಹೇಳುತ್ತಾರೆ. ಮದುವೆಗೆ ಎಷ್ಟು ಜನ ಬಂದಿದ್ದರು ಎಂದರೆ ನೆನಪಿಲ್ಲ. ಮದುವೆಯಲ್ಲಿ ಉಡುಗೊರೆ ಇರಲಿಲ್ಲ, ಆಶೀರ್ವಾದ ಇತ್ತು. ಮದುವೆ ಮಾತುಕತೆ ಸಂದರ್ಭದಲ್ಲಿ ನಾನು ಸಹ ಇದ್ದೆ. ಆಗ ವರದಕ್ಷಿಣೆ, ಬಂಗಾರ ಬೇಕೆಂಬ ಯಾವುದೇ ಬೇಡಿಕೆ ಇರಲಿಲ್ಲ ಎಂದರೆ ಹೌದು. ಹುಡುಗಿಯ ತಂದೆ ತಾಯಿ ಆರ್ಥಿಕವಾಗಿ ಬಲವಾಗಿಲ್ಲ ಎಂಬ ವಿಚಾರ ಆರೋಪಿತರಿಗೆ ಮೊದಲೇ ಗೊತ್ತಿತ್ತು ಎಂದರೆ ಗೊತ್ತಿಲ್ಲ. ನನಗೆ ವರದಕ್ಷಿಣೆ ಕೇಳಿದ್ದಾರೆ, ಹಲ್ಲೆ ಮಾಡಿದ್ದಾರೆ, 1 ನೇ ಆರೋಪಿಗೆ ಬೇರೆಯವರ ಜೊತೆ ಸಂಬಂಧ ಇದೆ ಎಂದು ಚಾಸಾ1 ರವರು ಹೇಳಿ ಮಾತ್ರ ಗೊತ್ತು. ನನ್ನ ಹತ್ತಿರ ಆರೋಪಿತರಾಗಲಿ ಅಥವಾ 1 ನೇ ಆರೋಪಿಯ ತಂದೆಯಾಗಲಿ ವರದಕ್ಷಿಣೆ ಬೇಕೆಂದು ಯಾವತ್ತೂ ಸಹ ಬೇಡಿಕೆ ಇಟ್ಟಿರುವುದಿಲ್ಲ.

2. ಮಹಜರ್ ಗೆ ಹೋದಾಗ ಮನೆಯ ಬೀಗ ಹಾಕಿದ್ದ ಕಾರಣ ಮನೆಯ ಒಳಗೆ ಹೋಗಲು ಆಗಿರುವುದಿಲ್ಲ. ಅದು ಬಾಡಿಗೆ ಮನೆಯಾಗಿತ್ತು ಎಂದರೆ ಸಾಕ್ಷಿ ಮೊದಲು ಆರೋಪಿತರು ಅವರ ಮನೆ ಎಂದು ಹೇಳಿದ್ದರು ನಂತರ ಅದು ಬಾಡಿಗೆ ಮನೆ ಎಂದು ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಚಾಸಾ1 ರವರು ನನ್ನ ಜೊತೆ ತುಂಬಾ ಕ್ಲೋಸ್ ಆಗಿದ್ದಾರೆ ಎಂದರೆ ಹೌದು. ಚಾಸಾ1 ರವರು ಮುಂಬೈನಿಂದ ಬಂದ ನಂತರ ನಾನು ಅವರ ಮನೆಗೆ ಹೋದಾಗ ಆರೋಪಿತರು ಹಲ್ಲೆ ಮಾಡಿದ್ದಾರೆ, ವರದಕ್ಷಿಣೆ ಕೇಳಿದ್ದಾರೆ ಮತ್ತು 1 ನೇ ಆರೋಪಿಗೆ ಅಕ್ರಮ ಸಂಬಂಧ ಇದೆ ಎಂಬ ವಿಚಾರವನ್ನು ಹೇಳಿರುತ್ತಾರೆ. ಚಾಸಾ1 ರವರು ಮದುವೆಯಾದ ನಂತರ ಹಾಗೂ ದಿಃ 3.4.2022 ರ ಒಳಗೆ ನಿಮಗೆ ದೂರವಾಣಿ ಕರೆ ಮಾಡಿ ಆರೋಪಿತರು ವರದಕ್ಷಿಣೆ ಕಿರುಕುಳ ನೀಡಿದ ಬಗ್ಗೆ ಹಾಗೂ ಹಲ್ಲೆ ಮಾಡಿದ ಬಗ್ಗೆ, 1 ನೇ ಆರೋಪಿಗೆ ಅಕ್ರಮ ಸಂಬಂಧ ಇದೆ ಎಂಬ ಬಗ್ಗೆ ನಿಮಗೆ ಹೇಳಿದ್ದಾರಾ ಎಂದರೆ ಇಲ್ಲ. ದಿಃ 3.4.2022 ಕ್ಕೂ ಪೂರ್ವದಲ್ಲಿ ಚಾಸಾ1 ರವರು ಒಮ್ಮೆ ಫೆಬ್ರವರಿ ತಿಂಗಳಲ್ಲಿ ಅವರ ಮನೆಗೆ ಬಂದು 3 – 4 ದಿನ ಇದ್ದು ಹೋಗಿದ್ದರು ಎಂದರೆ ಹೌದು. ಆ ಸಮಯದಲ್ಲೂ ಸಹ ಆಕೆ ನಿಮಗೆ ಏನು ಹೇಳಿರುವುದಿಲ್ಲ ಎಂದರೆ ಸಾಕ್ಷಿ ನಾನು ಆಕೆಗೆ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ. ದಿಃ 3.4.2022 ಕ್ಕೂ ಪೂರ್ವದಲ್ಲಿ ಮದುವೆಯಾದ ನಂತರ ಚಾಸಾ1 ರವರ ತಂದೆ ತಾಯಿ ಹಾಗೂ ಅವರ ಅಣ್ಣಂದಿರು ಚಾಸಾ1 ರವರಿಗೆ ವರದಕ್ಷಿಣೆ ಕಿರುಕುಳ, ಹಲ್ಲೆ, 1 ನೇ ಆರೋಪಿಗೆ ಅಕ್ರಮ ಸಂಬಂಧ ಇರುವ ಬಗ್ಗೆ ಸಹ ಹೇಳಿರುವುದಿಲ್ಲ ಎಂದರೆ ಸರಿ.

3. ನೀವು ಮುಂಬೈಗೆ ಹೋದಾಗ ಚಾಸಾ1 ರವರಿಗೆ ಹಲ್ಲೆ ಮಾಡಿದ ಬಗ್ಗೆ ನೆರೆಕೆರೆಯವರನ್ನು ವಿಚಾರಿಸಿದ್ದೀರಾ ಎಂದರೆ ಇಲ್ಲ. ಯಾವ ವಿಚಾರದ ಬಗ್ಗೆಯೂ ನಾನು ವಿಚಾರಣೆ ಮಾಡಿರುವುದಿಲ್ಲ.

ಪೊಲೀಸರ ಮೂಲಕವಾದರೂ ಆ ವಿಚಾರದಲ್ಲಿ ಅಕ್ಕಪಕ್ಕದವರನ್ನು ವಿಚಾರಿಸಿ ಎಂದು ಹೇಳಿದ್ದೀರಾ ಎಂದರೆ ಹೌದು. ಆ ಸಮಯದಲ್ಲಿ ಚಾಸಾ1 ರವರು ಹೇಳಿದ್ದಾರಾ ಎಂದರೆ ಗೊತ್ತಿಲ್ಲ. ನೀವು ಹೇಳಿದ ನಂತರ ಪೊಲೀಸರು ಅಕ್ಕಪಕ್ಕದವರ ಹತ್ತಿರ ವಿಚಾರಿಸಿದ್ದಾರಾ ಎಂದರೆ ನಾನು ಗಮನಿಸಿರುವುದಿಲ್ಲ. ಮದುವೆಯಾದ ನಂತರ ಚಾಸಾ1 ರವರ ಗಂಡನ ಮನೆಗೆ ಹೋಗಿ ಬರುವಾಗ ರೈಲಿನಲ್ಲಿ ಬಂದಿರುತ್ತಾರೆ ಎಂದರೆ ಹೌದು. ಪುನಃ ಗಂಡನ ಮನೆಗೆ ವಿಮಾನದಲ್ಲಿ ಹೋಗಿದ್ದಾರೆ ಎಂದರೆ ನನಗೆ ನೆನಪಿಲ್ಲ. ದಿಃ 3.4.2022 ಕ್ಕೆ ಚಾಸಾ1 ರವರಿಗೆ ಬೈದು ಬಸ್ಸು ಮತ್ತು ರೈಲಿನಲ್ಲಿ ಯಾಕೆ ಕಳುಹಿಸಿಲ್ಲ, ಫ್ಲೈಟ್ ನಲ್ಲಿ ಯಾಕೆ ಕಳುಹಿಸಿದ್ದಾರೆ ಎಂದು ಕೇಳಬೇಕು ಎಂದು ಅನಿಸಿತ್ತಾ ಎಂದರೆ ಇಲ್ಲ. ಪಂಚಾಯತಿಗೆ ಹೋದಾಗ ಸುರೇಶ್ ಕಡಂದಲೆ ರವರು ಲಿಲತಾ ರವರಿಗೆ ಚಾಸಾ1 ರವರ ಬಟ್ಟೆ ಬ್ಯಾಗನ್ನು ತರುವಂತೆ ಹೇಳಿದ್ದರಾ ಎಂದರೆ ಇಲ್ಲ. ಆ ದಿನ ಬ್ಯಾಗ್ ತರುವಾಗ ಚಾಸಾ1 ರವರಿಗೆ ಸೇರಿದ ಎಲ್ಲಾ ವಸ್ತುಗಳನ್ನು ತಂದುಕೊಟ್ಟಿದ್ದಾರಾ ಎಂದರೆ ನಾನು ನೋಡಿರುವುದಿಲ್ಲ. ಅಲ್ಲಿ ಏನೆಲ್ಲಾ ಬಾಕಿಯಾಗಿದೆ ಎಂಬುದನ್ನು ಚೆಕ್ ಮಾಡು ಎಂದು ನೀವಾಗಲಿ ಅಥವಾ ಅಲ್ಲಿದ್ದವರು ಹೇಳಿದ್ದೀರಾ ಎಂದರೆ ಇಲ್ಲ. ವರದಕ್ಷಿಣೆ ಬೇಕು ಎಂದು ಕೇಳಿರುವುದು ನಿಜ ಎಂದು ನಿಮಗೆ ಅನಿಸಿದೆಯಾ ಎಂದರೆ ಹೌದು. ಡೌರಿ ಮತ್ತು ಹಲ್ಲೆ ಮಾಡಿದ ಬಗ್ಗೆ ನಿಜ ಎಂದು ಅನಿಸಲು ಏನು ಕಾರಣ ಎಂದರೆ ಸಾಕ್ಷಿ 2 ನೇ ಆರೋಪಿ ನನಗೆ 2 - 3 ಕರೆ ಮಾಡಿ ಮಾತನಾಡುವಾಗ ನಮ್ಮ ಅಂತಸ್ತಿಗೆ ನೀವು ಇಲ್ಲ ಎಂಬುವ ರೀತಿಯಲ್ಲಿ ಮಾತನಾಡುವುದನ್ನು ಗಮನಿಸಿದ್ದೇವೆ, ಆದಕಾರಣ ಡೌರಿ ಕೇಳಿದ್ದಾರೆ ಎಂಬುದು ನಿಜ ಎಂದು ಅನಿಸಿದೆ ಎಂದು ಹೇಳುತ್ತಾರೆ. ಆರೋಪಿತರು ನನ್ನ ಹತ್ತಿರ ವರದಕ್ಷಿಣೆ ವಿಚಾರವನ್ನು ಕೇಳಿರುವುದಿಲ್ಲ. 3 ನೇ ತಾರೀಖಿನ ನಂತರ ಮಾತುಕತೆ ನಡೆದಿದ್ದು, ಅದರ ಒಳಗೆ ಅಂತಸ್ತಿನ ವಿಚಾರದ ಬಗ್ಗೆ ಮಾತುಕತೆ ನಡೆದಿಲ್ಲ ಎಂದರೆ ಹೌದು.

4. ಆರೋಪಿತರು ಚಾಸಾ1 ರವರಿಗೆ ಹಲ್ಲೆ ಮಾಡಿಲ್ಲ, ವರದಕ್ಷಿಣೆ ಕೇಳಿಲ್ಲ ಹಾಗೂ 1 ನೇ ಆರೋಪಿಗೆ ಅಕ್ರಮ ಸಂಬಂಧ ಇಲ್ಲ ಎಂಬ ವಿಚಾರ ಗೊತ್ತಿದ್ದರೂ ಸಹ ಚಾಸಾ1 ರವರು ನನ್ನ ಅಕ್ಕನ ಮಗಳಾದ ಕಾರಣ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ1 ರವರು ಸ್ವಲ್ಪ ಹಠದ ಸ್ವಭಾವದವರು ಆದ ಕಾರಣ ಆಕೆಯ ಮದುವೆ ಮುರಿದು ಬಿದ್ದಿದೆ ಎಂದರೆ ಸರಿಯಲ್ಲ. ಹೊರದೇಶಕ್ಕೆ ಹೋಗಲು ಚಾಸಾ1 ರವರಿಗೆ ಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ಹೊರದೇಶಕ್ಕೆ ಹೋಗಲು ಹಣ ಕೊಡಬೇಕೆಂದು 1 ನೇ ಆರೋಪಿಯಲ್ಲಿ ಕೇಳಿದಾಗ 1 ನೇ ಆರೋಪಿ ಹಣ ಇಲ್ಲ ಎಂದು ಹೇಳಿದ ಕಾರಣ ಚಾಸಾ1 ರವರೇ ಗಲಾಟೆ ಮಾಡಿದ್ದಾರೆ ಎಂದರೆ

ಸರಿಯಲ್ಲ. ಚಾಸಾ1 ರವರು ಮದುವೆಯಾದ ಕಾಲದಿಂದ ಆಕೆ ವಾಪಾಸು ಬರುವವರೆಗೂ ಆರೋಪಿತರು ಹಾಗೂ 1 ನೇ ಆರೋಪಿಯ ತಂದೆ ಚಾಸಾ1 ರವರನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ